**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,**

**ಬ್ಯಾಡಗಿ.**

**ಇ.ಸಿ.ಎ. ನಂ. 07/2022.**

**ಪಿ ಡಬ್ಲ್ಯೂಃ 1**

**ದಿನಾಂಕಃ 04-12-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಪಿ.ಆರ್.ಮುಂಜೋಜಿ ವಕೀಲರಿಂದಃ**

ನಾನು 5 ನೇ ತರಗತಿವರೆಗೆ ಓದಿರುತ್ತೇನೆ. ನನ್ನ ಸ್ವಂತ ಊರು ಗೌಡಗೇರಿ ಎಂದರೆ ಸರಿ. 1 ನೇ ಎದುರುಗಾರರ ಊರು ಗೌಡಗೇರಿ ಎಂದರೆ ಸರಿ. ನಮ್ಮ ತಂದೆಯ ಹೆಸರು ಅಂದಾಜು 8-10 ಎಕರೆ ಜಮೀನು ಇರಬಹುದು. ನಾನು ನನ್ನ ಜಮೀನಿನಲ್ಲಿ ಕೆಲಸ ಮಾಡುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವು ಹೊರಗಡೆ ಕೂಲಿ ಕೆಲಸ ಮಾಡುತ್ತೇವೆ ಎನ್ನುತ್ತಾರೆ. ನಮ್ಮ ಜಮೀನುಗಳನ್ನು ನಮ್ಮ ತಂದೆ ಮತ್ತು ಅಣ್ಣ ಸಾಗುವಳಿ ಮಾಡುತ್ತಾರೆ. ನನ್ನ ಹೆಂಡತಿಯ ಊರು ಮೋಟೆಬೆನ್ನೂರು ಹತ್ತಿರ ಅಳಲಗೇರಿ ಗ್ರಾಮ ಇರುತ್ತದೆ. ನಾನು 1 ನೇ ಎದುರುಗಾರನ ಬಳಿ ಕೆಲಸಕ್ಕೆ ಹೋಗುತ್ತಿದ್ದೆ ಎಂದು ತೋರಿಸಲು ಯಾವುದೇ ದಾಖಲಾತಿ ಹಾಜರು ಪಡಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ನಾನು ಕೂಲಿ ಕೆಲಸಕ್ಕೆ ಹೋಗಿ ಡ್ರೈವಿಂಗ್ ಕೆಲಸ ಮಾಡಿ ರೂ.200/- ಭತ್ಯೆ ಪಡೆಯುತ್ತಿದ್ದೆ. ರೂ.20,000/- ಸಂಬಳವನ್ನು ಪಡೆದ ಬಗ್ಗೆ ಯಾವುದೇ ದಾಖಲಾತಿ ಹಾಜರು ಪಡಿಸಿಲ್ಲ. ಆದರೆ ವಾರ ವಾರ ಅವಶ್ಯಕತೆ ಇದ್ದಾಗ ಮತ್ತು ಮಕ್ಕಳ ಶಾಲೆಯ ಫೀ ಕಟ್ಟುವಾಗ ಸಂಬಳ ಪಡೆಯುತ್ತಿದ್ದೆ ಅಂತಾ ನುಡಿಯುತ್ತಾರೆ. ನನಗೆ ಚಾಲನಾ ಪರವಾನಿಗೆ ಇದೆ. ನಾನು ಚಾಲನಾ ಪರವಾನಿಗೆ ಪತ್ರ ಹಾಜರು ಪಡಿಸಿರುತ್ತೇನೆ. ನಾನು ಚಾಲನಾ ಪರವಾನಿಗೆ ಪತ್ರ ಹೊಂದಿದ್ದೇನೆ ಮತ್ತು ಹಾಜರು ಪಡಿಸಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತಿಪ್ಪಣ್ಣನ ಮಗ ಪರಮೇಶಪ್ಪ ನನ್ನ ಸ್ನೇಹಿತ

ಎಂದರೆ ಸರಿಯಲ್ಲ. ಅವರ ಮನೆಗೆ ಕೂಲಿ ಕೆಲಸಕ್ಕೆ ಹೋದಾಗ ಪರಿಚಯ ಇರುತ್ತದೆ. ನಾನು 1 ನೇ ಎದುರುಗಾರನ ಮನೆಗೆ ಯಾವ ಕಾಲಕ್ಕೂ ಕೂಲಿ ಕೆಲಸಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ನಾನು ಯಾವ ಕಾಲಕ್ಕೂ 1 ನೇ ಎದುರುಗಾರನ ಟ್ರ್ಯಾಕ್ಟರ್ ಮೇಲೆ ಚಾಲನೆ ಮಾಡಿಲ್ಲ ಎಂದರೆ ಸರಿಯಲ್ಲ. ದಿನಾಂಕಃ 15.01.2022 ರಂದು 1 ನೇ ಎದುರುಗಾರನ ಟ್ರ್ಯಾಕ್ಟರ ಮೇಲೆ ಹೊಟ್ಟನ್ನು ಹಾಕಿಕೊಂಡು ಬಂದಿದ್ದರು ಎಂದರೆ ಸಾಕ್ಷಿ ಕಾಕೋಳದಿಂದ ಶೇಂಗಾ ಹೊಟ್ಟನ್ನು ಹಾಕಿಕೊಂಡು ಬಂದಿದ್ದೆವು ಎನ್ನುತ್ತಾರೆ. ಗೌಡಗೇರಿಯಿಂದ ಕಾಕೋಳಕ್ಕೆ ಬರಲು ಮೋಟೆಬೆನ್ನೂರಿನಿಂದ ಹಾದು ಬರಬೇಕು ಎಂದರೆ ಸರಿ. ಆ ದಿನ ನಾನು ನನ್ನ ಹೆಂಡತಿ ಮನೆಗೆ ಹೋಗಬೇಕೆಂದು ಪರಮೇಶಪ್ಪನ ಜೋತೆ ಬಂದಿದ್ದೆ ಎಂದರೆ ಸರಿಯಲ್ಲ. ನನಗೆ ವಾಹನ ಚಲಾಯಿಸಲು ಬರುವುದಿಲ್ಲ ಮತ್ತು ಚಾಲನಾ ಪತ್ರ ಇರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತವು ಲಾರಿ ಚಾಲಕನ ತಪ್ಪಿನಿಂದ ಆಗಿದೆ ಎಂದರೆ ಸರಿ. ಲಾರಿ ಮಾಲೀಕ ಮತ್ತು ಇನ್ಸೂರೇನ್ಸ ಕಂಪನಿಯನ್ನು ಈ ಪ್ರಕರಣದಲ್ಲಿ ಪಾರ್ಟಿ ಮಾಡಿಲ್ಲ ಎಂದರೆ ಸಾಕ್ಷಿ ರಾತ್ರಿ ಅಪಘಾತ ಪಡಿಸಿ ಅವರು ಓಡಿ ಹೋಗಿದ್ದರಿಂದ ಅವರನ್ನು ಪಾರ್ಟಿ ಮಾಡಿಲ್ಲ ಎನ್ನುತ್ತಾರೆ. ಫಿರ್ಯಾದಿಯನ್ನು ನಾನೇ ಸಲ್ಲಿಸಿರುತ್ತೇನೆ. ಫಿರ್ಯಾದಿಯಲ್ಲಿ ಸಂಪೂರ್ಣ ಅಪಘಾತವು ಲಾರಿ ಚಾಲಕನ ತಪ್ಪಿನಿಂದ ಆಗಿದೆ ಎಂದು ಹೇಳಿದ್ದೇನೆ ಎಂದರೆ ಸರಿ. ಅಪಘಾತವಾದ ತಕ್ಷಣ ನನ್ನನ್ನು ಸರ್ಕಾರಿ ಆಸ್ಪತ್ರೆಗೆ ಸೇರಿಸಿಲ್ಲ. ನಾನು ಓಂ ಆಸ್ಪತ್ರೆಯೊಂದಿಗೆ ಮಿಲಾಪೆಯಾಗಿ ಗಾಯದ ಪ್ರಮಾಣ ಪತ್ರವನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಈ ನನಗೆ ಯಾವುದೇ ಕೆಲಸ ಮಾಡಲು ಬರುವುದಿಲ್ಲ ಮತ್ತು ಜಮೀನಿಗೆ ಹೋಗಿ ಕೆಲಸ ಮಾಡುವುದಿಲ್ಲ. ಈ ನಾನು ಬ್ಯಾಡಗಿಯಲ್ಲಿ ವಾಸವಾಗಿದ್ದೇನೆ. ಕವಲಗೇರಿಯಿಂದ ಬಂದಿಲ್ಲ. ನಾನು ಅಗಸನಹಳ್ಳಿ ಬ್ಯಾಡಗಿಯಲ್ಲಿ ಬೀರಪ್ಪ ಕುರಿಯವರ ಮನೆಯಲ್ಲಿ ಬಾಡಿಗೆ ಇದ್ದೇನೆ. ನಾನು ಸಂಪೂರ್ಣವಾಗಿ ಅರೋಗ್ಯವಾಗಿದ್ದೇನೆ ನನಗೆ ಯಾವುದೇ ಅಂಗನ್ಯೂನತೆ ಇಲ್ಲ ಎಂದರೆ ಸರಿಯಲ್ಲ. ಓಂ ಆಸ್ಪತ್ರೆಯಲ್ಲಿ ಮಿಲಾಪೆಯಾಗಿ ನಿಪಿ-9 ಖೊಟ್ಟಿ ದಾಖಲೆನ್ನು ಸೃಷ್ಟಿ ಮಾಡಿ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಈಗ ನಾನು ಮನೆ ಮತ್ತು ಜಮೀನಿನ ಕೆಲಸ ಮಾಡಿಕೊಂಡು ಆರೋಗ್ಯವಾಗಿದ್ದೇನೆ ಎಂದರೆ ಸರಿಯಲ್ಲ. ಎಲ್ಲ ಮೆಡಿಕಲ್

ಬಿಲ್ಲುಗಳನ್ನು ಓಂ ಆಸ್ಪತ್ರೆಯೊಂದಿಗೆ ಮಿಲಾಪೆಯಾಗಿ ಸೃಷ್ಟಿ ಮಾಡಿ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು 1 ನೇ ಎದುರುಗಾರನ ಜೊತೆ ಕೆಲಸ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು 1 ನೇ ಎದುರುಗಾರನ ಮದ್ಯೆ ಮಾಲೀಕ ಮತ್ತು ಕಾರ್ಮಿಕ ಎಂದು ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸದರಿ ಅಪಘಾತದಲ್ಲಿ 1 ನೇ ಎದುರುಗಾರನ ಮಗ ಪರಮೇಶಪ್ಪ ತೀರಿಕೊಂಡಿದ್ದಾರೆ ಎಂದರೆ ಸರಿ. ಅಪಘಾತವಾದ ದಿನ ಪರಮೇಶಪ್ಪ ಟ್ರ್ಯಾಕ್ಟರ್ ಚಲಾಯಿಸುತ್ತಿದ್ದ ಎಂದರೆ ಸರಿಯಲ್ಲ. ಅಪಘಾತವು ಲಾರಿ ಚಾಲಕನ ತಪ್ಪಿನಿಂದ ಆಗಿದ್ದರೂ ಸಹ ಪರಿಹಾರಗೊಸ್ಕರ ನಾನು 1 ನೇ ಎದುರುಗಾರನ ಬಳಿ ಚಾಲಕನಾಗಿ ಕೆಲಸ ಮಾಡುತ್ತಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಎದುರುಗಾರರಿಂದ ಯಾವುದೇ ರೀತಿಯ ಪರಿಹಾರ ಪಡೆಯಲು ಬಾದ್ಯಸ್ತರಲ್ಲ ಎಂದರೆ ಸರಿಯಲ್ಲ. ಲಾರಿ ಮಾಲಕ ಮತ್ತು ಇನ್ಶೂರೇನ್ಸ್ ನ್ನು ಅವರನ್ನು ಪಾರ್ಟಿ ಮಾಡದ ಕಾರಣ ಈ ಅರ್ಜಿ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ.

2 ನೇ ಎದುರುದಾರರ ಪರ ವಕೀಲರು ಗೈರು ಹಾಜರಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೆ.ಸರಿ ಇದೆ.

**Sd/-**

ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ, ಬ್ಯಾಡಗಿ.